**ಅ. ದಾ. ಸಂ. : 34/2022**
**ಪಿ.ಡಬ್ಲ್ಯೂ : 01**

**ದಿನಾಂಕ : 22-04-2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಪ್ರತಿವಾದಿಯ ಪರ ಶ್ರೀ. ಜಿ.ಹೆಚ್.ಎಂ. ವಕೀಲರಿಂದ :-**

ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರಿಕೆಗೆ ಮಾಹಿತಿಯನ್ನು ಯಾರು ಕೊಟ್ಟಿರುತ್ತಾರೆಂದರೆ ಸಾಕ್ಷಿ ನಾನೇ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ದಾವ ಸ್ವತ್ತಿನ ಸರ್ವೆ ನಂಬರ್ ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ಹೌದು ಎಂದು ನುಡಿದು, ಸರ್ವೆ ನಂಬರ್-10/1 ಮತ್ತು 10/2 ಎಂದು ನುಡಿಯುತ್ತಾರೆ. ಸರ್ವೆ ನಂಬರ್-10/1 ರಲ್ಲಿ ಎಷ್ಟು ಜಮೀನು ಇದೆ ಎಂದರೆ ಸಾಕ್ಷಿ 1 ಎಕರೆ 6 ಗುಂಟೆ ಹಾಗೂ 1 ಗುಂಟೆ ಖರಾಬು ಜಮೀನು ಇರುತ್ತದೆಂದು ನುಡಿಯುತ್ತಾರೆ ಹಾಗೂ ಸರ್ವೆ ನಂಬರ್-10/2 ರಲ್ಲಿ 1 ಎಕರೆ 12 ಗುಂಟೆ ಜಮೀನು ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂಬರ್-10/1 ಮತ್ತು 10/2 ರ ಚಕ್ಕುಬಂದಿ ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ಪೂರ್ವಕ್ಕೆ-ರಾಮಣ್ಣ, ಪಶ್ಚಿಮಕ್ಕೆ-ಕರಿಯಪ್ಪ, ಲಕ್ಕಣ್ಣ, ಉತ್ತರಕ್ಕೆ-ವೀರಭದ್ರಯ್ಯನವರ ಮಕ್ಕಳು ಹಾಗೂ ದಕ್ಷಿಣಕ್ಕೆ-ಚಿಕ್ಕಣ್ಣನವರ ಮಕ್ಕಳು.

2. ಏನು ಪರಿಹಾರ ಕೇಳಿ ದಾವೆ ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ಯಾರೋ ಥರ್ಡ್ ಪಾರ್ಟಿ ಬಂದು ಗಲಾಟೆ ಮಾಡಿದ್ದು, ಅದನ್ನು ತಡೆಯಲು ದಾವ ಸಲ್ಲಿಸಿರುತ್ತೇನೆಂದು ನುಡಿಯುತ್ತಾರೆ. ಯಾರ ಯಾರ ವಿರುದ್ದ ದಾವೆಯನ್ನು ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ಗುರು, ರಾಮಯ್ಯ ಮತ್ತು ಪ್ರಭು ಎಂದು ನುಡಿಯುತ್ತಾರೆ. ಸದರಿ ಸರ್ವ ನಂಬರ್-10/1 ಮತ್ತು 10/2 ಮೂಲತಃ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ರಾಮಣ್ಣನವರಿಗೆ ಎಂದು ನುಡಿಯುತ್ತಾರೆ, ನಂತರ ಸದರಿ ರಾಮಣ್ಣ ನವರಿಂದ ಮುನಿರಾಜು ರವರಿಗೆ ಬಂದಿರುತ್ತದೆ, ನಂತರ

ಸದರಿ ಮುನಿರಾಜು ರವರಿಂದ ರಕ್ಷಿತ ರವರಿಗೆ ಬಂದಿರುತ್ತದೆ ಹಾಗೂ ಸದರಿ ರಕ್ಷಿತ ರವರಿಂದ ನಾನು ಖರೀದಿ ಮಾಡಿರುತ್ತೇನೆಂದು ನುಡಿಯುತ್ತಾರೆ. ಮುನಿರಾಜು ರವರಿಗೆ ಸದರಿ ರಕ್ಷಿತ ರವರು 2 ನೇ ಹೆಂಡತಿ ಎಂದರೆ ಸಾಕ್ಷಿ ಸದರಿ ರಕ್ಷಿತ ರವರು ಮುನಿರಾಜು ರವರ ಹೆಂಡತಿ ಎಂದು ಗೊತ್ತು, ಆದರೆ ಮೊದಲನೇ ಹೆಂಡತಿಯೋ ಅಥವಾ ಎರಡನೇ ಹೆಂಡತಿಯೋ ಎಂದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮುನಿರಾಜು ರವರಿಗೆ ಮುನಿವೆಂಕಟಮ್ಮ ಎಂಬ ಮೊದಲನೇ ಹೆಂಡತಿ ಇದ್ದರು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಸದರಿ ಮುನಿವೆಂಕಟಮ್ಮ ನವರಿಗೆ 1 ನೇ ಪ್ರತಿವಾದಿ ಹಾಗೂ ಸೌಮ್ಯ ಹೆಚ್ ಎಂಬ ಇಬ್ಬರು ಮಕ್ಕಳು ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಸದರಿ ಮುನಿವೆಂಕಟಮ್ಮ ಮರಣ ಹೊಂದಿದ ನಂತರ ಮುನಿರಾಜು ರವರು ರಕ್ಷಿತ ರವರನ್ನು ವಿವಾಹ ಆಗಿದ್ದು, ಸದರಿಯವರಿಗೆ ಯತೀಶಗೌಡ ಎಂಬ ಮಗ ಇದ್ದಾನೆ ಎಂದರೆ ಸಾಕ್ಷಿ ಹೌದು, ಆದರೆ ಆತನು ಅಪ್ರಾಪ್ತ ವಯಸ್ಕ ಎಂದು ನುಡಿಯುತ್ತಾರೆ.

3. ನೀವು ದಾವ ಸ್ವತ್ತುಗಳನ್ನು ಖರೀದಿ ಮಾಡುವಾಗ ಸದರಿ ರಕ್ಷಿತ ರವರಿಂದ ವಂಶವೃಕ್ಷವನ್ನು ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ಅದು ಅವರ ಸ್ವಯಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ಸಿ. ಜ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**